# ಸಂಕ್ರಾಂತಿ; ಆಹಾರ ಮೇಳ

ಹುಬ್ಬಳ್ಳಿ: ನವೋದ್ಯಮಿ ಸಂಸ್ಥೆ ಸಣ್ಣಉದ್ಯಮಿದಾರರ ಅಭಿವೃದ್ಧಿಗಾಗಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ಆಹಾರ ಮೇಳವನ್ನು ಜ.11 ರಿಂದ 13 ರವರೆಗೆ ಮಧ್ಯಾಹ್ನ 12 ರಿಂದ ರಾತ್ರಿ 9ರವರೆಗೆ ಕೆಂಪಣ್ಣವರ ಕಲ್ಯಾಣ ಮಂಟಪ, ವಿಜಯನಗರ, ಹುಬ್ಬಳ್ಳಿಯಲ್ಲಿ ಆಯೋಜಿಸಲಾಗಿದೆ.

ಸಂಸ್ಥೆಯು ರುಚಿಕರ ಮತ್ತು ವಿಭಿನ್ನ ಶೈಲಿಯ ಆಹಾರ ತಯಾರಿಸುವವರಿಗಾಗಿ ಇದೊಂದು ಉತ್ತಮ ಅವಕಾಶ ಒದಗಿಸುವ ಉದ್ದೇಶ ಹೊಂದಿದೆ. ಈ ಸಂತೆಯಲ್ಲಿ ಭಾಗವಹಿಸಿದ ಅತ್ಯುತ್ತಮ ಮಳಿಗೆಗಳಿಗೆ ಬಹುಮಾನ ನೀಡಲಾಗುವುದು. ಈ ಸಂತೆಯಲ್ಲಿ ತಾವು ತಯಾರಿಸಿದ ಆಹಾರ ಪದಾರ್ಥಗಳು, ತಿಂಡಿ ತಿನಿಸುಗಳು, ಸಿರಿಧಾನ್ಯಗಳು, ಸಾವಯವ ತರಕಾರಿ–ಹಣ್ಣುಗಳು, ವಿವಿಧ ರಾಜ್ಯಗಳ ವಿಶೇಷ ಆಹಾರಗಳನ್ನು ಪ್ರದರ್ಶನ ಮತ್ತು ಮಾರಾಟ ಮಾಡಲು ಬಯಸುವವರು ಸಂಸ್ಥೆಗೆ ಬಂದು ತಮ್ಮ ಹೆಸರನ್ನು ನೋಂದಾಯಿಸಬಹುದು.

ಈ ನವೋದ್ಯಮಿ ಸಂತೆಯಲ್ಲಿ ಮಳಿಗೆ ಹಾಕಲು ಬಯಸುವವರು ಸಂಪರ್ಕಿಸಬೇಕಾದ ವಿಳಾಸ ಮತ್ತು ದೂರವಾಣಿ ಸಂಖ್ಯೆ. ನವೋದ್ಯಮಿ, ದೇಶಪಾಂಡೆ ಫೌಂಡೇಶನ್, ಬಿವಿಬಿ ಕಾಲೇಜ ಕ್ಯಾಂಪಸ್ ಹುಬ್ಬಳ್ಳಿ. 91 8880964624/ 91 9900053761 ಸಂಖ್ಯೆ ಸಂಪರ್ಕಿಸಲು ಕೋರಲಾಗಿದೆ.